ಭತ್ತದ ಕಟಾವಿನ ನಡುವೆ ಒಂದು ಹಿಡಿ ಕಂತೆಯನ್ನು ಕೈಯಲ್ಲಿ ಹಿಡಿದು ನೆಟ್ಟಗೆ ನಿಂತರು ಅಪ್ಪ. ಕುಡ್ಲನ್ನು ಕೆಳಕ್ಕೆ ಹಾಕಿ ತಲೆಯ ಮುಂಡಾಸನ್ನು ಬಿಚ್ಚಿ ಒಮ್ಮೆ ಕೊಡವಿ ಬದುವಿನಲ್ಲಿ ಕುಳಿತುಕೊಂಡರು. ಕೊಯ್ಲಿನ ಉತ್ಸಾಹದಲ್ಲಿ ಅಪ್ಪನ ದಣಿವನ್ನು ಯಾರೂ ಗಮನಿಸಿರಲಿಲ್ಲ. ಗಮನಿಸಿದ್ದರೂ ಅವರು ಬೀಡಿ ಸೇದಲು ಬಿಡುವು ಮಾಡಿಕೊಂಡಿರಬಹುದೆಂದು ತಿಳಿದಿರಬಹುದು.

ದೇಹವೇ ಒಡೆದು ಬೆವರು ಸುರಿಯುತ್ತಿತ್ತು.

ಎದೆಯೊಳಗಿನ ನರಗಳನ್ನು ಯಾರೋ ಬುಡಸಮೇತ ಕಿತ್ತು ತೆಗೆದು ನೆತ್ತರಿನಲ್ಲಿ ತೊಳೆಯುತ್ತಿರಬಹುದು. ಉಸಿರಾಟಕ್ಕೆ ಕೋಣನ ತಣ್ಣನೆಯ ಗೊರಸಿನ ಧ್ವನಿ ಇಳಿದು ಬರುತ್ತಿತ್ತು. ಗಾಳಿ ಮೂಗಿನ ಹೊಳ್ಳೆಯ ನರೆತ ಕೂದಲುಗಳನ್ನು ಸ್ಪರ್ಶಿಸಿ ಅಲುಗಾಡಿಸುತ್ತಿತ್ತು.

ಅಪ್ಪ ಉಟ್ಟ ಕಿರುಪಂಚೆಯ ಮಡಿಕೆಯಿಂದ ಬೀಡಿಯನ್ನು ಹೊರತೆಗೆದರು. ರಣ ಬಿಸಿಲು... ಕೊಂಚ ಹೊತ್ತು ಮಲಗಬೇಕು!

ಕೊಯ್ಯಲು ಉಳಿದಿರುವ ಗದ್ದೆಯೊಂದರ ಬದುವಿನಲ್ಲಿ ಭತ್ತದ ಕದಿರುಗಳ ನೆರಳಿನಲ್ಲಿ ಮೈಚೆಲ್ಲಿ ಅಪ್ಪ ಬೀಡಿಯನ್ನು ತುಟಿಗಿಟ್ಟು ಬೆಂಕಿಕಡ್ಡಿ ಗೀರಿದರು. ಕಣ್ಣುಗಳನ್ನು ಮುಚ್ಚಿ ಆನಂದ ಪರವಶತೆಯಲ್ಲಿ ಬಲವಾಗಿ ಉಸಿರನ್ನು ಎಳೆದುಕೊಂಡರು. ಆಗ ಭತ್ತದ ತೆನೆಗಳ ನಡುವೆ ಉರಿಯುವ ಸೂರ್ಯ ಕೆಂಪು ಗೋಲವಾಗುತ್ತಿರುವುದನ್ನು ಅಪ್ಪ ಕಂಡರು.

“ನಿಮ್ಮಪ್ಪ ಚೈನ್ ಸ್ಮೋಕರಲ್ವಾ?” ಒಮ್ಮೆ ಡಾಕ್ಟರ್ ಕೇಳಿದ್ದರು.

“ಹೌದು ಸರ್” ಪ್ರೇಮಚಂದ್ರ ಹೇಳಿದ್ದ.

ತುರ್ತು ಚಿಕಿತ್ಸಾ ಘಟಕದ ಬೆಡ್‌ಶೀಟ್‌ನಲ್ಲಿದ್ದ ಬೀಡಿಗಳನ್ನು ಡಾಕ್ಟರ್ ಪ್ರೇಮಚಂದ್ರನ ಕೈಯಲ್ಲಿಟ್ಟಿದ್ದರು. ಇಲೆಕ್ಟ್ರೋ ಕಾರ್ಡಿಯೋ ಗ್ರಾಮ್‌ನಿಂದ ಹೊರಕಾಣಿಸುತ್ತಿರುವ ಗ್ರಾಫ್‌ನಲ್ಲಿ ಡಾಕ್ಟರ್ ಅಪ್ಪನ ಹೃದಯದ ಏರಿಳಿತವನ್ನು ಗಾಬರಿಯಿಂದ ಗಮನಿಸಿದ್ದರು. ಕಲ್ಲೇಟಿನಿಂದ ಚದುರುತ್ತಿರುವ ನೀರಿನಂತಿತ್ತು ಅಪ್ಪನ ಜೀವ.

**“Now he is in a critical stage.”**

ಡಾಕ್ಟರ್ ಇಸಿಜಿಯನ್ನು ಪ್ರೇಮಚಂದ್ರನಿಗೆ ತೋರಿಸಿದರು. ಅಪ್ಪ, ಆಗ ಭುಜದ ಮೇಲೆ ಗದ್ದೆಯನ್ನು ಸಪಾಟು ಮಾಡುವ ಹಲಗೆಯನ್ನಿಟ್ಟು ಸುಂದರವಾದ ಕನಸುಗಳನ್ನು ಹೆಣೆಯುತ್ತಿದ್ದರು. ಅದು ಮಳೆಗಾಲ ಆರಂಭವಾದಾಗಿನ ಅವರ ಕನಸಾಗಿತ್ತು. ಉತ್ತು ಮಗುಚಿ ಹಾಕಿದ ಮಣ್ಣಿನ ಹೆಂಟೆಗಳನ್ನು ಕೇಕಿನಂತೆ ಕತ್ತರಿಸಿ ತೆಗೆಯುವ ಮಳೆ. ಮೇಲ್ಗದ್ದೆಯ ಬದುವಿನಲ್ಲಿ ಚೆಂಡ ಮತ್ತು ಫಕ್ಕೀರ ನಿಂತಿದ್ದರು. ಕೋಣದ ಕುತ್ತಿಗೆಯ ಮೇಲೆ ನೊಗವಿಟ್ಟು ಹಲಿಕೆಯನ್ನು ಕಟ್ಟಿದ್ದರು. ಗೊರಗುವಿನ ಮೇಲೆ ಬಿರುಸಾಗಿ

